## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವೃತ್ತಿ ರಂಗಭೂಮಿ ನಾಟಕ ಕಂಪನಿಗಳಿಗೆ ಕಾಯಕಲ್ಪ ಯೋಜನೆಯಡಿ 2019-20ನೇ ಸಾಲಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ ಸಂಖ್ಯೆ: ಡಿಕೆಸಿ/46011/85/2019, ದಿ:17-01-2020.

ಪ್ರಸ್ತಾವನೆ:

ವೃತ್ತಿ ರಂಗಭೂಮಿ ನಾಟಕ ಕಂಪನಿಗಳ ಪುನಶ್ಚೇತನಕ್ಕಾಗಿ ಅನುದಾನ ನೀಡುವ ಯೋಜನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅಳವಡಿಸಿಕೊಂಡು ಇದಕ್ಕಾಗಿ 2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ರೂ.2.00 ಕೋಟಿಗಳ ಅನುದಾನವನ್ನು ಪ್ರಾಯೋಜಿಸಿಕೊಂಡಿದ್ದು, ಅದರನ್ವಯ ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಇವರು ನೀಡಿರುವ ವರದಿಯನ್ನು ಆಧರಿಸಿ 26 ವೃತ್ತಿ ನಾಟಕ ಕಂಪನಿಗಳಲ್ಲಿ ಶ್ರೀ ಗುರು ಖಾಸ್ಗತೇಶ್ವರ ನಾಟ್ಯ ಸಂಘ (ರಿ), ತಾಳಿಕೋಟೆ, ಕರ್ನಾಟಕ ಕಲಾ ವೈಭವ ಸಂಘ, ಬೆಂಗಳೂರು ಮತ್ತು ಶ್ರೀ ಕೆ.ಬಿ.ಆರ್.ಡ್ರಾಮಾ ಕಂಪನಿ, ದಾವಣಗೆರೆ ಇವುಗಳು ನಿರಂತರವಾಗಿ ಪ್ರದರ್ಶನ ಮಾಡಿರುವುದಿಲ್ಲ. ಆದಾಗ್ಯೂ ನೈಸರ್ಗಿಕ ನ್ಯಾಯ ಮತ್ತು ವೃತ್ತಿ ಕಂಪನಿಗಳಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಮೇಲಿನ 3 ಸಂಸ್ಥೆಗಳಿಗೆ ತಲಾ 2.00ಲಕ್ಷದಂತೆ ಅನುದಾನ ನಿಗದಿಗೊಳಿಸಲಾಗಿದೆ. ಈ 3 ಸಂಸ್ಥೆಗಳು ಒಳಗೊಂಡಂತೆ ಉಳಿದ 23 ವೃತ್ತಿ ನಾಟಕ ಕಂಪನಿಗಳು ಸೇರಿದಂತೆ ಒಟ್ಟು 26 ಕಂಪನಿಗಳಿಗೆ ಪಾವತಿಸಬೇಕಾದ ರೂ.199.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿದ್ದು, ಈ ಮೊತ್ತವನ್ನು 2019-20ನೇ ಸಾಲಿನ ವೃತ್ತಿ ನಾಟಕ ಕಂಪನಿಗಳಿಗೆ ಧನಸಹಾಯ ಶೀರ್ಷಿಕೆಯಡಿ ಲೆಕ್ಕ ಶೀರ್ಷಿಕೆ 2205-00-102-1-68-059 ಅಡಿ ಭರಿಸಿ, ಸಂಬಂಧಿಸಿದವರಿಗೆ ಬಿಡುಗಡೆ ಮಾಡಲು ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 66 ಕಸಧ 2020, ಬೆಂಗಳೂರು, ದಿನಾಂಕ:07-02-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವೃತ್ತಿ ರಂಗಭೂಮಿ ನಾಟಕ ಕಂಪನಿಗಳಿಗೆ ಕಾಯಕಲ್ಪ ಯೋಜನೆಯಡಿ 2019-20ನೇ ಸಾಲಿನಲ್ಲಿ, ಅನುಬಂಧದಲ್ಲಿ ನಮೂದಿಸಿರುವ ಒಟ್ಟು 26 ನಾಟಕ ಕಂಪನಿಗಳಿಗೆ ಅನುದಾನ ಬಿಡುಗಡೆ ಮಾಡಲು ತಗಲುವ ಒಟ್ಟು ವೆಚ್ಚ ರೂ.2.00 ಕೋಟಿ (ರೂಪಾಯಿ ಎರಡು ಕೋಟಿಗಳು ಮಾತ್ರ)ಗಳನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಇವರ ಮುಖಾಂತರ ಸಂಬಂಧಿಸಿದವರಿಗೆ ಬಿಡುಗಡೆ ಮಾಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿದೆ.

1) ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಣ ಮಂಜೂರು ಮಾಡಿದ್ದು, ಅದೇ ಉದ್ದೇಶಕ್ಕೆ ಬಳಸತಕ್ಕದ್ದು.

2) ಮಂಜೂರು ಮಾಡಿದ ಹಣ ಸಮರ್ಪಕವಾಗಿ ಬಳಕೆಯಾದ ಬಗ್ಗೆ ಲೆಕ್ಕಪರಿಶೋಧಕರಿಂದ ದೃಢೀಕರಿಸಿದ ಲೆಕ್ಕಪಟ್ಟಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು.

ಈ ವೆಚ್ಚವನ್ನು 2019-20ನೇ ಸಾಲಿನ ವೃತ್ತಿನಾಟಕ ಕಂಪನಿಗಳಿಗೆ ಧನಸಹಾಯ ಶೀರ್ಷಿಕೆ 2205-00-102-1-68-059 ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2020, ದಿನಾಂಕ:13-01-2020ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Malathi 7/2/20
(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಸಂಸ್ಕೃತಿ ಶಾಖೆ)

ಗೆ:

1. ಮಹಾಲೇಖಪಾಲರು (ಎ&ಇ), (ಜಿ&ಎಸ್ ಎಸ್ ಎ), (ಇ & ಆರ್ ಎಸ್ ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸಂಬಂಧಿಸಿದವರಿಗೆ (ಇಲಾಖಾ ನಿರ್ದೇಶಕರ ಮುಖಾಂತರ).
5. ಖಜಾನೆ ಅಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 66 ಕಸಧ 2020, ದಿ:07-02-2020ಕ್ಕೆ

## ಅನುಬಂಧ

### ಕಾಯಕಲ್ಪ ಯೋಜನೆಯಡಿ 2019-20ನೇ ಸಾಲಿಗೆ ಅನುದಾನಕ್ಕಾಗಿ ಶಿಫಾರಸ್ಸುಗೊಂಡಿರುವ ವೃತ್ತಿ ನಾಟಕ ಕಂಪನಿಗಳ ವಿವರಗಳು.

| ಕ್ರ. ಸಂ. | ವೃತ್ತಿ ನಾಟಕ ಕಂಪನಿಗಳ ವಿವರ | ರೂ. ಲಕ್ಷಗಳಲ್ಲಿ |
|---|---|---|
| 1 | ಶ್ರೀ ಕುಮಾರೇಶ್ವರ ಕೃಪಾಪೋಷಿತ ಪಂಡಿತ<br>ಪಂಚಾಕ್ಷರ ಗವಾಯಿಗಳವರ ನಾಟ್ಯಸಂಘ, ಗದಗ ಜಿಲ್ಲೆ,<br>ಕಾರ್ಯದರ್ಶಿ-ಶ್ರೀ ರೇವಣಸಿದ್ದಯ್ಯ. | ರೂ.12.00 ಲಕ್ಷ |
| 2 | ಶ್ರೀ ಕೆ.ಬಿ. ಡ್ರಾಮಾ ಕಂಪನಿ, ದಾವಣಗೆರೆ (ರಿ)<br>ಚಿಂದೋಡಿ ಶ್ರೀಕಂಠೇಶ್ವರ,<br>1968/9, ಮೊದಲನೆ ಮಹಡಿ, ಆಶೀರ್ವಾದ ಮಾತಾ ಪಿತೃ ನಿಲಯ,<br>ರಿಂಗ್ ರೋಡ್, ನವೋದಯ ಸ್ಕೂಲ್ ಹಿಂಭಾಗ ಎಸ್.ಎಸ್. ಬಡಾವಣೆ<br>'ಬಿ' ಬ್ಲಾಕ್, ದಾವಣಗೆರೆ-577004. | ರೂ.12.00 ಲಕ್ಷ |
| 3 | ಶ್ರೀ ಗುರು ತೋಂಟದಾರ್ಯ ನಾಟ್ಯ ಸಂಘ (ರಿ) ಮುಂಡರಗಿ<br>ಎಚ್. ಹಿರಯ್ಯ, ಪಿ.ಶಂಕರ<br>ಯಲಬುರ್ಗಾ ತಾ\|\|, ಕೊಪ್ಪಳ ಜಿ\|\|<br>ಮುಂಡರಗಿ.<br>ಮೊ:9740724063, 9739934987 | ರೂ.12.00 ಲಕ್ಷ |
| 4 | ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ<br>ಮುಕ್ಕಾಂ ವಾರ್ಡ್ ನಂ.16, ಯೋಗಾಮಠ ಕಾಲೋನಿ,<br>ವಿಜಯಪುರ ಜಿಲ್ಲೆ, ಹಾನಗಲ್.<br>ಮೊ:9448406016. | ರೂ.12.00 ಲಕ್ಷ |
| 5 | ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ) ಚಿತ್ತರಗಿ<br>ಕೆ.ಬಿ. ರೇಣುಕಾ ಶಂಕರ<br>ಕಿರಣ ನಿಲಯ, ಮದಬಾವಿ ಅಂಚೆ- 586208<br>ತಾ\|\| ಬಸವನಬಾಗೇವಾಡಿ ಜಿ\|\| ವಿಜಾಪುರ, ಮೊ:968675050. | ರೂ.12.00 ಲಕ್ಷ |
| 6 | ಶ್ರೀ ಗುರು ವಿಶ್ವಾರಾಧ್ಯ ನಾಟ್ಯ ಸಂಘ, ಜೇವರ್ಗಿ<br>ಶ್ರೀ ಅಯ್ಯಗಳಸ್ವಾಮಿ ಹಿರೇಮಠ, ಬಿಳ್ವಾರ<br>ತಾ\|\| ಜೇವರ್ಗಿ, ಜಿ\|\| ಗುಲಬುರ್ಗಾ | ರೂ.12.00 ಲಕ್ಷ |
| 7 | ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ, ಜೇವರ್ಗಿ<br>ರಾಜಣ್ಣ, ಜೇವರ್ಗಿ<br>C/o, ಜ್ಯೋತಿ ಮೊಬೈಲ್, ವಿಜಾಪೂರ ರಸ್ತೆ, ಜೇವರ್ಗಿ, ಕಲಬುರ್ಗಿ ಜಿಲ್ಲೆ.<br>ಮೊ:8123639708, 9620560335. | ರೂ.12.00 ಲಕ್ಷ |
| 8 | ಶ್ರೀ ಸಂಗಮೇಶ್ವರ ನಾಟ್ಯ ಸಂಘ, ಆಲಾಪುರ<br>ಶ್ರೀಮತಿ ಪ್ರೇಮಾ ಬಸವರಾಜ ಪಾಟೀಲ, ಗುರು ಟಾಕೀಸ್ ಹತ್ತಿರ,<br>ಗುಳೇದಗುಡ್ಡ ತಾ\|\| ಬಾದಾಮಿ, ಜಿ\|\| ಬಾಗಲಕೋಟ<br>ಮೊ:9448190539 | ರೂ.12.00 ಲಕ್ಷ |

| | | |
|---|---|---|
| 9 | ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರ್ಗಿ<br>ಎಮ್.ಎಸ್. ಮಡ್ಡಿ<br>ತಾ\|\| ಅಕ್ಕಲಕೋಟ, ಜಿ; ಸೋಲಾಪುರ (ಗಡಿನಾಡ)<br>ಮೊ:9822939481. | ರೂ.10.50 ಲಕ್ಷ |
| 10 | ಬಿ.ಎಸ್.ಆರ್. ನಾಟಕ ಸಂಘ ಗುಬ್ಬಿ (ರಿ)<br>ಜಿ. ಎಸ್. ಪ್ರಶಾಂತ, ವೀರಭದ್ರೇಶ್ವರ ನಿಲಯ ಪ್ಲಾಟ್ ನಂ. 223,<br>ಗಣೇಶನಗರ, ಬಡೆಪೂರ, ಗುಲ್ಬರ್ಗಾ | ರೂ.9.50 ಲಕ್ಷ |
| 11 | ಶ್ರೀ ಕುಮಾರೇಶ್ವರ ನಾಟಕ ಸಂಘ (ರಿ) ಚಿತ್ರದುರ್ಗ<br>ಬಿ. ಕುಮಾರಸ್ವಾಮಿ<br>ಚಿತ್ರದುರ್ಗ-577501<br>ತಾ\|\| ಚಿತ್ರದುರ್ಗ, ಜಿ\|\| ಚಿತ್ರದುರ್ಗ<br>ಮೊ:9986815227, 7022672516 | ರೂ.8.50 ಲಕ್ಷ |
| 12 | ಶ್ರೀ ಮಂಜುನಾಥ ನಾಟ್ಯ ಸಂಘ (ರಿ) ರಾಣೆಬೆನ್ನೂರು<br>ನಾಗರತ್ನಮ್ಮ ಚಿಕ್ಕಮಠ, ತಾ\|\| ರಾಣೇಬೆನ್ನೂರು, ಜಿ\|\| ಹಾವೇರಿ<br>ಮೊ:9740792217. | ರೂ.8.00 ಲಕ್ಷ |
| 13 | ಶ್ರೀ ಘನಮಠೇಶ್ವರ ನಾಟ್ಯ ಸಂಘ,<br>ತಾ\|\| ಮುದ್ದೇಬಿಹಾಳ, ಬಿಜಾಪುರ (ಜಿ), ಕುಂಟೋಜಿ<br>ಅಧ್ಯಕ್ಷರು ನಾಗಯ್ಯ<br>ಮೊ:9689789015 | ರೂ.8.00 ಲಕ್ಷ |
| 14 | ಶ್ರೀ ಗುರುಪಾದಲಿಂಗೇಶ್ವರ ನಾಟ್ಯ ಸಂಘ (ರಿ), ಮುತ್ತಂಗಿ<br>ತಾ\|\| ಹುಮನಾಬಾದ ಜಿಲ್ಲ\|\| ಬೀದರ್<br>ವೃತ್ತಿ ರಂಗಭೂಮಿ ಕಲಾವಿದರ ಸಂಘ<br>ಮೊ:9591475314,9741697810. | ರೂ.8.00 ಲಕ್ಷ |
| 15 | ಶ್ರೀ ಶಿರಡಿ ಸಾಯಿಬಾಬಾ ನಾಟ್ಯ ಸಂಘ, ಕೊಡೇಕಲ್<br>ಬಸವರಾಜು ಕಟ್ಟಿಮನಿ.<br>ಮು.ಹಿತಲಪೂರ, ಅಂಚೆ\|\| ಮಿನಾಕೇರ ತಾ\|\|ಹುಮನಾಬಾದ ಜಿ\|\|<br>ಬೀದರ-585227 ಮೊ:9591374160. | ರೂ.7.50 ಲಕ್ಷ |
| 16 | ಶ್ರೀ ಗುರು ಮಲ್ಲಿಕಾರ್ಜುನ ನಾಟ್ಯ ಸಂಘ (ರಿ)<br>ಕಲ್ಲೂರು ಮಂಜೇಶ, ದಂಡಿನ ಸಿದ್ದರು ನಗರ, ಹಾವೇರಿ, ತಾ\|\| ಜಿ\|\| ಗದಗ<br>ಮೊ:9743939467 | ರೂ. 5.50 ಲಕ್ಷ |
| 17 | ಶ್ರೀ ಸಿದ್ದೇಶ್ವರ ನಾಟ್ಯ ಸಂಘ<br>ತಾ\|\| ಮುದ್ದೇಬಿಹಾಳ, ಜಿ\|\| ವಿಜಾಪುರ, ನಾಲತ್ವಾಡ<br>ಮೊ:9449237895 | ರೂ. 5.00 ಲಕ್ಷ |
| 18 | ಶ್ರೀ ಚನ್ನ ಸಿದ್ದೇಶ್ವರ ನಾಟ್ಯ ಸಂಘ<br>ಮುತ್ತಾನ ಬಬಲಾದ, ಗುಲಬರ್ಗಾ<br>ಕಾವೇರಿ ಹುಮನಾಬಾದ<br>ಮೊ:9880801901. | ರೂ. 5.00 ಲಕ್ಷ |
| 19 | ಶ್ರೀ ಕೆ.ಪಿ. ಬಿಫ್. ನಾಟ್ಯ ಸಂಘ, ಬೀದರ<br>ವಾಂಜ್ರಿ ಕಾಲೋನಿ, ಭವಾನಿ ಮಂದಿರ ಹುಮನಾಬಾದ್. ಜಿ\|\| ಬೀದರ<br>[illegible] | ರೂ.5.00 ಲಕ್ಷ |

| | | |
|---|---|---|
| 20 | ಶ್ರೀ ಸದ್ಗುರು ಪಂಚಲಿಂಗೇಶ್ವರ ನಾಟ್ಯ ಸಂಘ ವಿಠ್ಠಲಪೂರ<br>ಮನೆ.ನಂ 24, ಆಶ್ರಮ ಕಾಲೋನಿ ಫಿಲ್ಟರ್ ಬೆಡ್ ಸುಲ್ತಾನಪುರ ರಸ್ತೆ,<br>ಕಲಬುರಗಿ -585104<br>ಅಧ್ಯಕ್ಷರು: ಎಸ್.ಕೆ. ನಾಗೇಶ ಮಾಸ್ತರ್<br>ಮೊ:9731772750, 9535195552. | ರೂ. 4.00 ಲಕ್ಷ |
| 21 | ಶ್ರೀ ಅಗಸಿ ಬಸವೇಶ್ವರ ನಾಟ್ಯ ಸಂಘ(ರಿ)<br>ತಾ\|\| ಶಹಾಪುರ, ಜಿಲ್ಲಾ\|\| ಯಾದಗಿರಿ, ದೊಡ್ಡಸಗರ,<br>ಬಾಬು.ಬಿ. ಸಿತಾರೆ ನಗರ<br>ಮೊ:9945087015 | ರೂ. 4.00 ಲಕ್ಷ |
| 22 | ಶ್ರೀ ಶಿರಡಿ ಸಾಯಿಬಾಬಾ ನಾಟ್ಯ ಸಂಘ (ರಿ)<br>ಶ್ರೀ ರಾಮಚಂದ್ರಪ್ಪಾ ಕಟ್ಟಿಮನಿ,<br>ಸಾ\|\| ನಿರ್ಣಾವಾಡಿ – 585227, ತಾ\|\| ಚಿಟ್ಟಗುಪ್ಪ,<br>ಜಿ\|\| ಬೀದರ್ -585227, ಮೊ:9663502116, 9980698623. | ರೂ. 4.00 ಲಕ್ಷ |
| 23 | ಓಂ ಅಲ್ಲಮ ಪ್ರಭು ಲಿಂಗೇಶ್ವರ ನಾಟ್ಯ ಸಂಘ (ರಿ)<br>ಬಿ.ಸುರೇಶ ಕಟ್ಟಿಮನಿ<br>ಚಿನಕೆಪಳ್ಳಿ, ಬಸವ ನಗರ ಕಲವಾಡಿ ರಸ್ತೆ, ಭಾಲ್ಕಿ ತಾ\|\| ಚಿಂಚೋಳಿ ಜಿ\|\|<br>ಕಲಬುರ್ಗಿ<br>ಮೊ:9902288052. | ರೂ. 4.00 ಲಕ್ಷ |
| 24 | ಶ್ರೀ ಗುರು ಬಾಸ್ಕರೇಶ್ವರ ನಾಟ್ಯ ಸಂಘ (ರಿ)<br>ತಾಳಿಕೋಟಿ<br>ಶ್ರೀ ರಾಜು ತಾಳಿಕೋಟಿ (ಆರ್.ಎಂ. ಯಂಕಂಚಿ)<br>ತಾ\|\| ಮುದ್ದೇಬಿಹಾಳ ಜಿ\| ಬಿಜಾಪುರ-586101<br>ಮೊ:9448815614, 9980313822. | ರೂ.2.00 ಲಕ್ಷ |
| 25 | ಕರ್ನಾಟಕ ಕಲಾ ವೈಭವ ಸಂಘ<br>ಮಾಲತಿ ಸುಧೀರ<br># 31, ಎಲ್.ಐ.ಸಿ. ಕಾಲೋನಿ, ವೆಸ್ಟ್ ಆಫ್ ಕಾರ್ಡ್ ರೋಡ್,<br>ರಾಜಾಜಿನಗರ, ಬೆಂಗಳೂರು-560086.<br>ಮೊ:9845254061. | ರೂ.2.00 ಲಕ್ಷ |
| 26 | ಶ್ರೀ ಕೆ.ಬಿ.ಆರ್. ಡ್ರಾಮಾ ಕಂಪನಿ,<br>ಮಾಲೀಕರು: ಚಿಂದೋಡಿ .ಎಲ್. ಚಂದ್ರಧರ<br># 3371/10, ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ<br>ದಾವಣಗೆರೆ-577004.<br>ದೂ:08192-221798 | ರೂ.2.00 ಲಕ್ಷ |
| (ಒಟ್ಟು ರೂಪಾಯಿ ಒಂದು ಕೋಟಿ ತೊಂಭತ್ತೆಂಟು ಲಕ್ಷದ ಐವತ್ತು ಸಾವಿರಗಳು ಮಾತ್ರ ) | | ರೂ.198.50 ಲಕ್ಷ |

Malati N 7/2/20

(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಸಂಸ್ಕೃತಿ ಶಾಖೆ)